OS No. 40/2016 DW-1

<u>ದಿನಾಂಕ **25.10.2024** ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಸಿ ಎಂ ಕೆ ವಕೀಲರಿಂದಃ</u>

2024 ರಲ್ಲಿ ದಾವಾ ಆಸ್ತಿಗಳು ರಮೇಶ್ ರೆಡ್ಡಿ ಎನ್ನುವವರ ಹೆಸರಿನಲ್ಲಿವೆ. 2019 ಈ ರೀತಿ ವರ್ಗಾವಣೆಯಾಗಿವೆ. ರಮೇಶ್ ರೆಡ್ಡಿ ಎನ್ನುವವರ ಹೆಸರಿನಲ್ಲಿರುವ ಪಹಣಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ಇನ್ನು ಆಗಿಲ್ಲ ಎಂದು ನುಡಿಯುತ್ತಾರೆ. ನೊಂದಣಿ ಕ್ರಯ ಪತ್ರದ ಮೂಲಕ ರಮೇಶ್ ರೆಡ್ಡಿ ಎನ್ನುವವರ ಹೆಸರಿಗೆ ವರ್ಗಾವಣೆ ಮಾಡಿರುತ್ತೇವೆ.

2. ಎಂ ಎ ಸಂಖ್ಯೆ 5/2018 ರಲ್ಲಿ ಯಾರ ಹೆಸರಿಗೂ ವರ್ಗಾವಣೆ ಮಾಡಬಾರದು ಎಂದು ತಡೆಯಾಜ್ಞೆ ಆಗಿದೆ ಎಂದರೆ ಸಾಕ್ಷಿಯು ಆಗಿತ್ತು ಈಗ ತೆರವು ಆಗಿದೆ ಎಂದು ನುಡಿಯುತ್ತಾರೆ. ಈ ಆದೇಶವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಎಂ.ಎ ಸಂಖ್ಯೆ 5/2018 ರ ಆದೇಶದ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುತ್ತೇವೆ. ಈ ಮೇಲ್ಮನವಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಎಂ ಎ ಸಂಖ್ಯೆ5/2018 ರ ಆದೇಶ ಅಂತಿಮ ಎಂದರೆ ಸುಳ್ಳು.

3. ಕೆ ಪಿ ನಂಜುಂಡಿ ಅಂದರೆ ವಾದಿಗೆ ಕ್ರಯದ ಕರಾರು ಮಾಡಿಕೊಡುವಾಗಿ ನನ್ನ ಅಕ್ಕ ಭಾರತೀಗೌಡ ವಿದೇಶದಲ್ಲಿದ್ದರು ಎಂದರೆ ನಿಜ. ಅವರಿಂದ ಪವರ್ ಆಫ್ ಅಟಾರ್ನಿ ಪಡೆದಿದ್ದೆವು. ನಿಪಿ-4 ಪವರ್ ಆಫ್ ಅಟಾರ್ನಿ ಆಗಿರುತ್ತದೆ. ವಾದಿಯವರಿಂದ ಮೂರು ಹಂತಗಳಲ್ಲಿ ಕ್ರಯದ ಮೊಬಲಗನ್ನು ಒಪ್ಪಿಕೊಂಡಿದ್ದೆವು ಎಂದರೆ ನಿಜ. ಎರಡು ಹಂತದ ಹಣವನ್ನು ನಾನು ಪಡೆದಿದ್ದೇನೆಂದರೆ ನಿಜ. ಕ್ರಯದ ಕರಾರು ದಿನ 10 ಲಕ್ಷ ಪಡೆದಿದ್ದೇನೆ. ದಿಃ28.10.2015 ರಲ್ಲಿ 20 ಲಕ್ಷ ಹಣವನ್ನು ವಾದಿಯವರಿಂದ ಪಡೆದಿದ್ದೇವೆ ಎಂದರೆ ನಿಜ. 20 ಲಕ್ಷ ಹಣ ಪೋಡಿ ಮಾಡಿಸುವ ಸಂದರ್ಭದಲ್ಲಿ ಪಡೆಯಬೇಕು ಎಂದು ಕರಾರು ಆಗಿತ್ತು ಎಂದರೆ ನಿಜ. ನಾನು ಪೋಡಿಗೆ ಅರ್ಜಿ ಹಾಕಿದ್ದೇನೆ. ಅದರ ಪ್ರತಿಯನ್ನು ನ್ಯಾಯಾಲಯಕ್ಕೆ ಹಾಜರು

ಪಡಿಸಲು ತೊಂದರೆ ಇಲ್ಲ. ಪೋಡಿ ಮಾಡಿಸಲು ಹಣ ಪಡೆದಿದ್ದರೂ ಸಹ ನಾನು ಅರ್ಜಿಯನ್ನು ಹಾಕಿಲ್ಲ ಎಂದರೆ ಸುಳ್ಳು. ಕರಾರು ಆದ 2 ದಿನದ ಒಳಗೆ ದಾವಾ ಆಸ್ತಿಯನ್ನು ವ್ಯವಸಾಯೇತರ ಉದ್ದೇಶಕ್ಕೆ ಪರಿವರ್ತನೆ ಮಾಡಲು ಅರ್ಜಿ ಹಾಕಬೇಕೆಂದು ಷರತ್ತು ಇತ್ತು ಎಂದರೆ ಸಾಕ್ಷಿಯು 2 ದಿನ ಎಂದು ಇರಲಿಲ್ಲ ಎಂದು ನುಡಿಯುತ್ತಾರೆ.

4. ನಿಪಿ-4 ರಿಂದ ನಿಪಿ-10 ರ ಪಹಣಿಗಳಲ್ಲಿ ಸಾಲದ ಬಗ್ಗೆ ನಮೂದು ಇದೆ ಎಂದರೆ ನಿಜ. 2022-23 ರ ಪಹಣಿಗಳಲ್ಲಿ ಸಾಲದ ಬಗ್ಗೆ ನಮೂದು ಇದೆ ಎಂದರೆ ನಿಜ. ಈ ಸಾಲಗಳನ್ನು ತೀರಿಸಲು ನನಗೆ ಸಾಮರ್ಥ್ಯ ಇಲ್ಲದೇ ಇರುವುದರಿಂದ ಅವು ಮುಂದುವರೆಯುತ್ತಿವೆ ಎಂದರೆ ಸುಳ್ಳು. ಕ್ರಯದ ಕರಾರು ಮುಂಗಡ ಮೊತ್ತ 30 ಲಕ್ಷ ವಾದಿಗೆ ಹಿಂದಿರುಗಿಸಿದ ಮೊತ್ತ ನನ್ನ ಬಳಿ ಇದ್ದ ಬಗ್ಗೆ ದಾಖಲೆ ಇಲ್ಲ. ಸಾಕ್ಷಿಯು ಮುಂದುವರೆದು ನಗದು ಹಣ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ನಗದು ಹಣ ಇದ್ದ ಬಗ್ಗೆ ನನ್ನ ಬಳಿ ದಾಖಲೆ ಇದೆ. ಅದರ ಮುಖ ಬೆಲೆ 500 ರೂಪಾಯಿ ಆಗಿತ್ತು. 30 ಲಕ್ಷ ಹಣ ಕೊಟ್ಟ ಬಗ್ಗೆ ವಾದಿಯಿಂದ ದಾಖಲೆಯನ್ನು ಬರೆಯಿಸಿಕೊಂಡಿಲ್ಲ. ನಿಡಿ-1 ರ ಮೇಲೆ Cancelled ಎಂಬ ಪದವನ್ನು ಮ್ಯಾನೇಜರ್ ರಾಮಕೃಷ್ಣ ಎನ್ನುವವರು ಬರೆದಿರುತ್ತಾರೆ. ರಾಮಕೃಷ್ಣ ರವರ ಸಹಿಯನ್ನು ನಿಡಿ-1 ರ ಮೇಲೆ ಪಡೆದಿಲ್ಲ. ವಾದಿ ಅಥವಾ ರಾಮಕೃಷ್ಣ ರವರು Cancelled ಎಂಬ ಪದವನ್ನು ಬರೆದಿಲ್ಲ ಎಂದರೆ ಸುಳ್ಳು. 30 ಲಕ್ಷ ಕೊಟ್ಟ ಬಗ್ಗೆ ಷರಾ ಬರೆಸಲು ತೊಂದರೆ ಇರಲಿಲ್ಲ. ದಿಃ28.10.2015 ರಲ್ಲಿ ಮೂಲ ಕ್ರಯದ ಕರಾರನ್ನು ಜೆರಾಕ್ಸ್ ಗಾಗಿ ತೆಗೆದುಕೊಂಡು ಹೋಗಿ ವಾದಿ ಕಛೇರಿಗೆ ಕಲರ್ ಜೆರಾಕ್ಸ್ ಪ್ರತಿಯನ್ನು ಕೊಟ್ಟು ಮೂಲ ಪ್ರತಿಯನ್ನು ನಾನು ತೆಗೆದುಕೊಂಡು ಹೋಗಿರುತ್ತೇನೆಂದರೆ ಸುಳ್ಳು. ಮೂಲ ಪ್ರತಿಯನ್ನು ತೆಗೆದುಕೊಂಡು ಹೋಗಿದ್ದರಿಂದ ನಾನು ಪೋಡಿಗೆ ಅರ್ಜಿ ಹಾಕಿಲ್ಲ ಎಂದರೆ ಸುಳ್ಳು. Cancelled ಎಂಬ ಪದವನ್ನು ನಾನು ಬರೆದಿದ್ದೇನೆಂದರೆ ಸುಳ್ಳು. 30 ಲಕ್ಷ ರೂಪಾಯಿಯನ್ನು ವಾದಿಗೆ ಹಿಂದಿರುಗಿಸಿಲ್ಲ ಎಂದರೆ ಸುಳ್ಳು. ಈ ಮೊತ್ತದ ಆರ್ಥಿಕ ಸಾಮರ್ಥ್ಯ ನನಗೆ ಇಲ್ಲ ಎಂದರೆ ಸುಳ್ಳು. ಕರಾರಿನ ಕಲರ್ ಜೆರಾಕ್ಸ್ ಪ್ರತಿಯನ್ನು ಕೊಟ್ಟ ಬಗ್ಗೆ ನನ್ನ ಮತ್ತು ನನ್ನ ಸಹೋದರಿಯ ವಿರುದ್ಧ ಮಲ್ಲೇಶ್ವರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದರೆ ನಿಜ. ಕಲರ್ ಜೆರಾಕ್ಸ್ ಕರಾರು ಪ್ರತಿ ಮತ್ತು ಮೂಲ ಕರಾರು

ಪತ್ರವು ನ್ಯಾಯಾಲಯದಲ್ಲಿರುವುದರಿಂದ ಠಾಣೆಯವರು ಬಿ ವರದಿ ಸಲ್ಲಿಸಿರುತ್ತಾರೆಂದರೆ ಸುಳ್ಳು. ನಾವು ದಾವಾ ಆಸ್ತಿಯಲ್ಲಿ ಕಾಂಪೌಂಡ್ ಅನ್ನು ನಿರ್ಮಾಣ ಮಾಡಿಲ್ಲ. ನಾನು ಮೂಲ ಕರಾರು ಪತ್ರವನ್ನು ತೆಗೆದುಕೊಂಡು ಹೋಗಿದ್ದರಿಂದ ಅದರಲ್ಲಿರುವ ಷರತ್ತುಗಳನ್ನು ಪಾಲಿಸಿಲ್ಲ ಎಂದರೆ ಸುಳ್ಳು. ಬಾಧ್ಯತೆಯಿಂದ ತಪ್ಪಿಸಿಕೊಳ್ಳಲು ವಾದಿಗೆ ಮೋಸ ಮಾಡುತ್ತಿದ್ದೇನೆಂದರೆ ಸುಳ್ಳು. ವಾದಿಗೆ ಮೋಸ ಮಾಡುವ ಉದ್ದೇಶದಿಂದ ಬೇರೆಯವರ ಹೆಸರಿಗೆ ಪಹಣಿಯನ್ನು ವರ್ಗಾವಣೆ ಮಾಡಿರುತ್ತೇನೆಂದರೆ ಸುಳ್ಳು. ಕರಾರು ಪತ್ರ ಪರಿಹಾರವಾದ ನಂತರ ರಮೇಶ್ ರೆಡ್ಡಿ ಎನ್ನುವವರ ಹೆಸರಿಗೆ ಕ್ರಯ ಪತ್ರ ಮಾಡಿರುತ್ತೇನೆ. ಈ ವಿಷಯವನ್ನು ಮುಖ್ಯ ಸಾಕ್ಷಿ ವಿಚಾರಣೆ ಮತ್ತು ಲಿಖಿತ ಹೇಳಿಕೆಯಲ್ಲಿ ತಿಳಿಸಿಲ್ಲ.

ಸಮಯಾವಕಾಶ ಕೋರಿದ್ದು ಮುಂದುವರೆದ ಪಾಟೀಸವಾಲಿಗಾಗಿ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

(ವೆಂಕಟೇಶಪ್ಪ. ವಿ)
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.